# GKVK @ 360°

*News letter from HOT Agri. Journalism students*



Vol. 04 Issue: 01 | Dept. of Agril. Extension | January 2018

## DEAN'S MESSAGE

AGRICULTURE-A GREEN CULTURE



I am happy to note that final year BSc (Agri) students undergoing hands on training course in agriculture journalism are going to learn more about agriculture journalism which in turn helps our farmers community.

Further, as a part of course activities students are bringing out news letter **GKVK@360** which would help the students to learn the skill of writing, editing and publishing agriculture literature.

I wish your news letter a grand success and will become a source of inspiration for other students too.

Further I here by appeal to the student community to use bicycle as mode of transport to make our evergreen campus pollution free

## Editor's Desk



The final year B.Sc (Agri.) students who are under going HOT (Agri Journalism) course are bringing campus news letter gkvk @360 as a part of their practical learning experience. This news letter covering wide range of interesting facts of the campus like usage of two wheelers by the student community, news stories of important events of the campus along with an exclusive interview which shows that in it depicts an agricultural students can also excel in literary world. Hope this news letter will give a bird eye view of the campus besides providing learning experience to the students.

**Dr. K. P. Raghuprasad**

*Campus Survey*

# Agricos on Wheels





In order to minimize the air and sound pollution, we need to have eco friendly mobility. In this background a study was conducted to know the existing mode of mobility or transport of students in GKVK campus as a part of HOT journalism activity.

The results of the study clearly indicate that 21% of boys and 27% of girls are using two wheeler for their day to day mobility in the campus, among the data collected by 180 boys and 120 girls in the campus. Further, survey also reveals that only 7% of the boys and 5% of the girls using bicycles for their internal mobility.

community transport like bus being used by 15% of boys and 37% of girls as and when required. It is well understood that remaining students are not using any mode of transport and they will go by walk enjoying the beauty of this ever green campus.

From this study, we wish that instead of using two wheeler in the campus which can cause sounded air pollution, besides added expenditure, and chances of accident. Hence it is suggested to the students community to use use bicycles which will save the time as well as helpful for good health. Use bicycle service yana for your healthy payana.







## ಜಿ.ಕೆ.ವಿ.ಕೆ.ಯಲ್ಲಿ "ಬೈಸಿಕಲ್ ಯಾನ"




ಆಧುನಿಕ ಯುಗದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಪರಿಸರದ ಮೇಲಿನ ಒತ್ತಡ ತಡೆಯುವ ನಿಟ್ಟಿನಲಿ ಜಾಗತಿಕ ಮಟ್ಟದಲ್ಲಿ ಗಂಭೀರ ಚಿಂತನೆಗಾಳಗುತ್ತಿವೆ. ಈ ರೀತಿಯ ಒಂದು ವಿಭಿನ್ನ ಪ್ರಯತ್ನಕ್ಕೆ ಜಿ.ಕೆ.ವಿ.ಕೆ. ಯಲ್ಲಿ "ಯಾನ" ಎಂಬ ಸೈಕಲ್ ಸಂಸ್ಥೆಯೊಂದಿಗೆ 25ನೇ ನವೆಂಬರ್ 2017ರಂದು ಕೃ.ವಿ.ವಿ. ಕುಲಪತಿಗಳು ಈ ಸೇವೆಯನ್ನು ಉದ್ಘಾಟಿಸಿ ಚಾಲನೆ ನೀಡಲಾಯಿತು ಚಾಲನೆ ನೀಡಿದರು. ಇದರಿಂದ ಜಿ.ಕೆ.ವಿ.ಕೆ. ಮತ್ತಷ್ಟು ಹಸಿರಾಗಲಿ, ಮಾಲಿನ್ಯರಹಿತವಾಗಲಿ ಎಂದು ಆಶಿಸಿದರು. ಕೃಷಿ ಕಾಲೇಜಿನ ಡೀನ್‌ರವರಾದ ಡಾ॥ ರಾಜೇಂದ್ರಪ್ರಸಾದ್ ಹಾಗೂ ಇತರೆ ಅಧಿಕಾರಿಗಳು ಹೆಚ್.ಓ.ಟಿ. ಪತ್ರಿಕೋದ್ಯಮ ವಿದ್ಯಾರ್ಥಿಗಳು ಸೈಕಲ್ ತಿಳಿಯುವುದ ರೊಂದಿಗೆ ಈ ಪಯಣ ಆರಂಭವಾಯಿತು.

"ಯಾನ" ಆಧುನಿಕ ತಂತ್ರಜ್ಞಾನಗಳನ್ನು ಒಳಗೊಂಡಿದೆ. ಮೊಬೈಲ್ ಅಳವಡಿಕೆ, ಬಾರ್ ಕೋಡ್ ಸ್ಕ್ಯಾನಿಂಗ್, ಜಿಯೋ ಫೆನ್ಸಿಂಗ್ ಒಳಗೊಂಡಂತೆ ಗಂಟೆಗೆ ರೂ. 5.00 ರಂತೆ ನಿರಂತರ ಸೇವೆ ನೀಡುತ್ತಿದ್ದು, ಇದರ ಸಂಪೂರ್ಣ ಬಳಕೆಯಿಂದ ಜಿ.ಕೆ.ವಿ.ಕೆಯು ಆವರಣವನ್ನು ಮಾಲಿನ್ಯ ಮುಕ್ತಗೊಳಿಸಬಹುದಾಗಿದೆ.



## BOOK EXHIBITION

Can you expect a day which turn our eyes from "mobile to book" yes

**BOOKS ARE EVER -TREASURE OF KNOWLEDGE**

The book exhibition which was organized in north block of GKVK campus by involving 30 different renowned publications from all over India on 23&24 November 2017. Students and teachers had an the opportunity to buy the books of their choice and even recommend to the library.This kind of exhibition will motivate the students to inculcate the habit of reading which in turn helps them academically and building their personality.

## ಜಿ. ಕೆ. ವಿ. ಕೆ. ಯಲ್ಲಿ ಮುಖ್ಯಮಂತ್ರಿ

ರಾಜ್ಯ ರಂಗ ಪ್ರಯೋಗಗಳಲ್ಲಿ ದಾಖಲೆ ನಿರ್ಮಿಸಿದ್ದ "ಮುಖ್ಯಮಂತ್ರಿ" ಜಿ.ಕೆ.ವಿ.ಕೆ.ಯಲ್ಲಿ ಕಲರವಿಸಿದ್ದು ಈ ಭಾರಿಯ ವಿಶೇಷ. ಇದೇ ನವೆಂಬರ್ 2017 ರಂದು ಜಿ.ಕೆ.ವಿ.ಕೆ.ಯ ಕುವೆಂಪು ಸಭಾಂಗಣ ತಳಿರು ತೋರಣ ಮತ್ತು ಚಿತ್ತಾಕರ್ಷಕ ರಂಗೋಲಿಗಳಿಂದ ಪ್ರೇಕ್ಷಕರನ್ನು ಸೆಳೆದಿತ್ತು. ಖ್ಯಾತ ರಂಗ ಪ್ರತಿಭೆ ಚಲನಚಿತ್ರ ನಟ ಡಾ॥ ಮುಖ್ಯಮಂತ್ರಿ ಚಂದ್ರುರವರು ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವ ಜನಪ್ರಿಯ "ಮುಖ್ಯಮಂತ್ರಿ" ನಾಟಕ ರಾಜಕೀಯ ತಂತ್ರಗಾರಿಕೆಗಳನ್ನು ಬಳಸಿ 24 ಗಂಟೆಯೊಳಗೆ ಕಳೆದುಕೊಂಡ ಮುಖ್ಯಮಂತ್ರಿ ಖುರ್ಚಿಯನ್ನು ಮತ್ತೆ ಹೇಗೆ ದಕ್ಕಿಸಿಕೊಳ್ಳುತ್ತಾರೆ ಎಂಬುದನ್ನು ಪ್ರಚುರಪಡಿಸಿತ್ತು. ಇದು ರಾಜ್ಯದಲ್ಲಿ ಈ ನಾಟಕದ 665ನೇ ಪ್ರಯೋಗ ಎನ್ನುವುದು ವಿಶೇಷ. ಜಿಕೆವಿಕೆಯ ಕನ್ನಡ ತಿಂಗಳ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಈ ನಾಟಕ ರಂಗಾಸಕ್ತ ಮನಸ್ಸುಗಳನ್ನು ಒಂದುಗೂಡಿಸುವಲ್ಲಿ ಯಶಸ್ವಿಯಾಯಿತು.



# ರಾವೇ ನೆನಪು

## ನಮ್ಮ ಹಳ್ಳಿ - ನಮ್ಮ ರಾವೇ



ನೇಗಿಲ ಹಿಡಿದು, ಹೊಲದೊಳು ಹಾಡುತ, ಉಳುವ ರೈತನೊಂದಿಗೆ ಜೀವನ ನಡೆಸಲು ಕೃ.ವಿ.ವಿ., ಬೆಂಗಳೂರು ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ (ರಾವೇ) ಮೂಲಕ ಒಳ್ಳೆಯ ಅವಕಾಶವನ್ನು ಒದಗಿಸಿಕೊಟ್ಟಿತ್ತು. ಮೂರು ವರ್ಷಗಳ ಕಾಲ ನಾವು ಕಾಲೇಜಿನಲ್ಲಿ ಕಲಿತ ಜ್ಞಾನವನ್ನು ಮೂರು ತಿಂಗಳ ರಾವೇ ಕಾರ್ಯಕ್ರಮದಲ್ಲಿ ರೈತರೊಂದಿಗೆ ಹಂಚಿಕೊಂಡೆವು. ರೈತರಿಗೆ ನಾವು ಕಲಿಸಿದ್ದಕ್ಕಿಂತ ಅವರಿಂದ ಕಲಿತದ್ದೇ ಹೆಚ್ಚು. ಕೃಷಿಯನ್ನು ಪ್ರಾಯೋಗಿಕವಾಗಿ ಕಲಿಯಲು, ಹಳ್ಳಿಗಾಡಿನ ಹಸಿರನ್ನು ಮತ್ತು ನಮ್ಮ ಸಂಸ್ಕೃತಿಯ ಸೊಬಗನ್ನು ಅನುಭವಿಸಲು, ರೈತನ ನಿಜವಾದ ಕಷ್ಟವನ್ನು ಅರಿಯಲು ರಾವೇ ಅವಕಾಶ ಮಾಡಿಕೊಟ್ಟಿತು.

ಅಂತಿಮ ವರ್ಷದ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗಾಗಿ ಈ ಕಾರ್ಯಕ್ರಮವನ್ನು 2017–18ನೇ ಸಾಲಿನಲ್ಲಿ ತುಮಕೂರು ಹಾಗೂ ರಾಮನಗರ ಜಿಲ್ಲೆಗಳ 15 ರೈತ ಸಂಪರ್ಕ ಕೇಂದ್ರಗಳ ವ್ಯಾಪ್ತಿಯ 15ಹಳ್ಳಿಗಳಲ್ಲಿ ಆಯೋಜಿಸಲಾಗಿತ್ತು. ನಾವು ನಮ್ಮನ್ನು ಹಲವಾರು ಕೃಷಿ ಚಟುವಟಿಕೆಗಳಲ್ಲಿ, ಕೃಷಿ ಸಂಬಂಧಿತ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದೆವು. ಇದರ ಜೊತೆ ಜೊತೆಗೆ ಕೃಷಿಕರಿಗೆ ಪ್ರಚಲಿತ ಜನರಿಗೆ ಜಾಗೃತಿ ಮೂಡಿಸಲು ನಾಟಕ, ಪಾರಂಪರಿಕ ವಸ್ತು ಪ್ರದರ್ಶನ, ಹಳ್ಳಿ ಕ್ರೀಡೆಗಳನ್ನು ವ್ಯವಸ್ಥೆಗೊಳಿಸಿದ್ದೆವು. ಶಿಕ್ಷಕರ ಭೇಟಿ ಮತ್ತು ವಿಚಾರಣಾ ಸಂಕೀರ್ಣ ರೈತರಿಗೆ ಉಪಯುಕ್ತವಾಗುತ್ತಿದ್ದವು. ಯಾವುದೇ ಸಂಬಂಧವಿಲ್ಲದ ಹಳ್ಳಿಗೆ ಹೊದರೂ ನಾವು ಹಿಂತಿರುಗುವುದರೊಳಗೆ ಹಳ್ಳಿಯ ಮಂದಿಯೆಲ್ಲಾ ನೆಂಟರಾಗಿದ್ದರು.







# Krishimela-2017 in HOT Camera











## ಸಾಹಿತ್ಯ ಕೃಷಿಯಲ್ಲಿ ಜಿ.ಕೆ.ವಿ.ಕೆ. ಯ ಪೈರು

ಮಲೆನಾಡಿನ ಶಿವಮೊಗ್ಗ ಜಿಲ್ಲೆಯವರಾದ ನೂರ್ ಸಮ್ಮತ್ ಅಬ್ಬಲಗೆರೆ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರಿನಲ್ಲಿ ಸ್ನಾತಕ ಹಾಗೂ ಕೀಟಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ಕೃಷಿ ಅಧಿಕಾರಿಯಾಗಿ ವೃತ್ತಿ ಜೀವನ ಪ್ರಾರಂಭಿಸಿ, ಸಾಹಿತ್ಯದಲ್ಲಿ ಕೃಷಿ ಕೈಗೊಳ್ಳುವ ಮೂಲಕ ನಾಡಿನ ಉದಯೋನ್ಮುಕ ಲೇಖಕರಾಗಿ ಹೊರಹೊಮ್ಮಿರುತ್ತಾರೆ. ಇವರು ಅಂಕುರ ಎಂಬ ಚುಟುಕು ಸಾಹಿತ್ಯ, ಮರಣೋತ್ತರ ಸತ್ಕಾರ, ವರ್ಣಮಾಲೆ ನಾದಲೀಲೆ ಮುಂತಾದ ಸಾಹಿತ್ಯಕೃತಿಗಳನ್ನು ರಚಿಸಿದ್ದು, ಡಾ॥ ಜೆ.ಎಸ್.ಎಸ್. ಕಾವ್ಯಶ್ರೀ ಪ್ರಶಸ್ತಿ, ರಾಷ್ಟ್ರಕವಿ ಕುವೆಂಪು ಪ್ರಶಸ್ತಿ, ಕನ್ನಡ ರತ್ನ ಪ್ರಶಸ್ತಿ, ಹುಬ್ಬಳ್ಳಿಯ ಕರ್ನಾಟಕ ರತ್ನ ಪ್ರಶಸ್ತಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ಕೃತಿ ಪ್ರಶಸ್ತಿ, ಮುಂತಾದುವುಗಳಿಗೆ ಪಾತ್ರರಾಗಿದ್ದಾರೆ.

**1. ಜಿಕೆ.ವಿ.ಕೆ.ಯ ಕೃಷಿ ವಿದ್ಯಾರ್ಥಿಯಾಗಿ ಕೃಷಿ ಕಾಲೇಜಿನಲ್ಲಿ ಸಾಹಿತ್ಯ ರಚಿಸುವ ಬಗ್ಗೆ ಪ್ರೇರಣೆ ಏನು?**

ವಿದ್ಯಾರ್ಥಿಯಾಗಿ ಜಿ.ಕೆ.ವಿ.ಕೆ.ಯಲ್ಲಿ ನಾನು ಸಣ್ಣ–ಸಣ್ಣ ಸಾಹಿತ್ಯ ರಚನೆಗಳಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದೆ. ಅಲ್ಲಿ ನಮ್ಮ ಕೀಟಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ॥ ಬೆಳವಾಡಿ ನನಗೆ ಸ್ಫೂರ್ತಿ. ಇವರು ಮತ್ತು ತೇಜಸ್ವಿಯವರು ಸೇರಿ ರಚಿಸಿದ 'ಕೀಟಗಳ ವಿಸ್ಮಯ' ಪುಸ್ತಕ ನನಗೆ ಕೀಟಗಳ ಬಗ್ಗೆ ಬರೆಯಬೇಕೆಂಬ ಕುತೂಹಲವನ್ನು ಮೂಡಿಸಿತು.

**2. ಸಾಹಿತ್ಯದೆಡೆಗಿನ ನಿಮ್ಮ ಪಯಣಕ್ಕೆ ನಿಮಗೆ ಸ್ಫೂರ್ತಿಯಾದ ಕವಿಗಳಾರು?**

ನಾನು ಸ್ನಾತಕಪೂರ್ವ ಪದವಿಯನ್ನು ಮಾಡುತ್ತಿದ್ದಾಗಿನಿಂದಲೂ ನನಗೆ ಸಾಹಿತ್ಯದೆಡೆಗೆ ಒಲವಿತ್ತು. ಕೀಟಶಾಸ್ತ್ರ ನನಗೆ ಬಹಳ ಇಷ್ಟವಾದ ವಿಷಯ, ಹೀಗಿರುವಾಗ ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ “ನಡೆದಾಡುವ ಕೀಟ, ಹಾಡುವ ಕೋಗಿಲೆ” ಎಂಬ ಪುಸ್ತಕವನ್ನು ಓದಿದೆ. ಈ ಪುಸ್ತಕ ನನಗೆ ಕೀಟಗಳ ಬಗ್ಗೆ ಇರುವ ವಿಸ್ಮಯಗಳನ್ನು ತಿಳಿಸಿತ್ತು ಮತ್ತು ಕೀಟಗಳ ಬಗ್ಗೆ ಸಾಹಿತ್ಯ ರಚಿಸಲು ಸ್ಫೂರ್ತಿಯಾಯಿತು. ಇದರ ಜೊತೆ ಜೊತೆಗೆ ನನ್ನ ತಂದೆಯವರಿಂದ ದೊರೆತ ಸಾಹಿತ್ಯ ಸ್ಫೂರ್ತಿಯಿಂದ ನಾನೊಬ್ಬ ಲೇಖಕನಾಗಿ ಹೊರಹೊಮ್ಮಿದೆ.

**3. ಜಿ.ಕೆ.ವಿ.ಕೆ. ಆವರಣ ನಿಮ್ಮ ಸಾಂಸ್ಕೃತಿಕ ಪ್ರತಿಭೆಗೆ ಯಾವ ರೀತಿ ನೆರವಾಯಿತಿ?**

ಜಿ.ಕೆ.ವಿ.ಕೆ.ಯ ಭೂಮಿಕ ಸಾಂಸ್ಕೃತಿಕ ತಂಡದಲ್ಲಿ ಒಬ್ಬನಾಗಿದ್ದ ನನಗೆ ಸಾಂಸ್ಕೃತಿಕ ಕಾರ್ಯಕ್ರಮಗಳೆಂದರೆ ಒಂದು ರೀತಿಯ ಹುಚ್ಚು, ಮೈಮ್, ನಾಟಕ, ಬ್ರೇಕ್ ಡ್ಯಾನ್ಸ್ ಮತ್ತು ನನ್ನದೇ ರೀತಿಯ ಜನಪದ ನೃತ್ಯಗಳ ಜೊತೆಗೆ ನಾನು ಯುವಜನೋತ್ಸವ ಕಾರ್ಯಕ್ರಮಗಳಲ್ಲಿಯೂ ಸಹ ಸಕ್ರೀಯವಾಗಿ ಭಾಗವಹಿಸಿದ್ದೆ.

**4. ಪ್ರಸ್ತುತ ಕೃಷಿ ಸಾಹಿತ್ಯ ಕ್ಷೇತ್ರದಲ್ಲಿ ಏನಾದರೂ ಬದಲಾವಣೆ ಬೇಕೆ?**

ಇತ್ತೀಚಿನ ದಿನಗಳಲ್ಲಿ ಲೇಖಕರು ಕೃಷಿ ಸಾಹಿತ್ಯದೆಡೆಗೆ ಕಡಿಮೆ ಒಲವನ್ನು ತೋರಿಸುತ್ತಿದ್ದಾರೆ. ರೈತರಿಗೆ ಉಪಯುಕ್ತವಾಗುವಂತಹ ರೈತರಿಗೆ ಅರ್ಥವಾಗುವ ಭಾಷೆಯಲ್ಲಿ ಸಾಹಿತ್ಯಗಳನ್ನು ರಚಿಸಬೇಕೆಂಬುದು ನನ್ನ ಆಶಯ.

**5. ಪ್ರಸ್ತುತ ನಿಮಗಿರುವ ಗುರಿ?**

ನಾನು ಕೆಲವು ಚಲನ ಚಿತ್ರಗಳಿಗೆ ಹಾಡುಗಳನ್ನು ರಚಿಸಿದ್ದೇನೆ ಮತ್ತು ಹಲವಾರು ನಾಟಕಗಳಲ್ಲಿ ಸಹ ಭಾಗವಹಿಸಿದ್ದೇನೆ. ಮಕ್ಕಳಿಗಾಗಿ ಒಂದು ಚಿತ್ರ ನಿರ್ದೇಶನ ಮಾಡಬೇಕೆಂಬುದು ನನ್ನ ಹುಮ್ಮಸ್ಸು. ಕಥೆ ಸಿದ್ಧವಾಗಿದೆ ಒಬ್ಬ ಸೂಕ್ತ ನಿರ್ಮಾಪಕರಿಗಾಗಿ ಕಾಯುತ್ತಿದ್ದೇನೆ.




**6. ಕೃಷಿ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ?**

ವ್ಯಾಸಂಗದ ಜೊತೆ ಬರವಣಿಗೆಯ ಕಲಿಕೆಯನ್ನು ರೂಪಿಸಿಕೊಳ್ಳಿ, ಇದರಿಂದ ಕೃಷಿ ಸಾಹಿತ್ಯಕ್ಕೊಸ್ಕರ ನಿಮ್ಮ ಸೇವೆ ದೊರೆಯುವುದಾಗಲಿ. ಉತ್ತಮ ಬರವಣಿಗೆ ಭಾಷಣಕಲೆ ನಿಮ್ಮ ಮುಂದಿನ ಯಾವುದೇ ಕಾರ್ಯ ಕ್ಷೇತ್ರದಲ್ಲೂ ನಿಮ್ಮನ್ನು ಗುರುತಿಸಿಕೊಳ್ಳುವಂತೆ ಮಾಡುತ್ತದೆ. ನಿಮ್ಮ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತದೆ.

